ದಿನಾಂಕ : 27.06.2022 ಓ.ಎಸ್ ನಂ.105/2017 ರಲ್ಲಿ
ಪಿ.ಡಬ್ಲ್ಯೂ-1(ಎಸ್.ವಿಜಿಯಾ)

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ವಾದಿ ಪರ ಶ್ರೀ ವಿ.ಎಂ.ಎಸ್ ವಕೀಲರಿಂದಃ

ನಾನು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ಸರ್ವೇ ನಂ.51/1 ರ ಪಹಣಿ ಪತ್ರಿಕೆಯನ್ನು (4 ಪುಟಗಳು) ನಿಪಿ-1, ಎಂ.ಆರ್. ನಂ.36/2005-06 ನ್ನು ನಿಪಿ-2, ಋಣಭಾರ ಪ್ರಮಾಣಪತ್ರವನ್ನು ನಿಪಿ-3, ನಮ್ಮ ವಕೀಲರ ಮೂಲಕ ಪ್ರತಿವಾದಿಗೆ ನೀಡಲಾದ ನೋಟಿಸ್‌ನ ಕಛೇರಿ ಪ್ರತಿಯನ್ನು ನಿಪಿ-4, ಅದಕ್ಕೆ ಸಂಬಂಧಿಸಿದ ಅಂಚೆ ರಶೀದಿಯನ್ನು ನಿಪಿ-5, ಆರ್.ಪಿ.ಎ.ಡಿ ಮೂಲಕ ಪ್ರತಿವಾದಿಗೆ ನೀಡಲಾದ ನೋಟಿಸ್ ವಾಪಸ್ಸಾಗಿದ್ದು, ಅಂಚೆ ಲಕೋಟೆಯನ್ನು ತೆರೆದು ನೋಡಲಾಗಿ ಅದರಲ್ಲಿನ ನೋಟಿಸನ್ನು ನಿಪಿ-6, ಅಂಚೆ ಲಕೋಟೆಯನ್ನು ನಿಪಿ-7, ಅಂಚೆ ರಶೀದಿಯನ್ನು ನಿಪಿ-8 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಸರಸ್ವತಿ ಕೆ.ಎನ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.